433

60

# ತಹಶೀಲ್ದಾರ್ ಸಂಡೂರು ಇವರ ನ್ಯಾಯಾಲಯ,

**ಉಪಸ್ಥಿತರು:-** ಶ್ರೀ.ಎಂ.ಚಂದ್ರಶೇಖರ, ತಹಶೀಲ್ದಾರರು, ಸಂಡೂರು.

**ವಾದಿಗಳು:-**

ಶ್ರೀ.ಮಲ್ಲಿಕಾರ್ಜುನಗೌಡ ತಂದೆ.ಶ್ರೀ.ದೊಡ್ಡನಗೌಡ ಎಲ್.ಬಿ.ಕಾಲೋನಿ, ಸಂಡೂರು

**ವಿರುದ್ಧ**

**ಪ್ರತಿವಾದಿ:-** ಕಂದಾಯ ನಿರೀಕ್ಷಕರು ಸಂಡೂರು.

**ಪೀಠಿಕೆ:-**

| ತಾಲ್ಲೂಕು | ಹೋಬಳಿ | ಗ್ರಾಮ | ಸ.ನಂ. | ವಿಸ್ತೀರ್ಣ |
|---|---|---|---|---|
| ಸಂಡೂರು | ಸಂಡೂರು | 18-ಹುಲಿಕುಂಟ | 215 | 6.44 |

ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ, ವಾದಿ-1 ಶ್ರೀ.ಮಲ್ಲಿಕಾರ್ಜುನಗೌಡ ತಂದೆ.ಶ್ರೀ.ದೊಡ್ಡನಗೌಡ ಎಲ್.ಬಿ.ಕಾಲೋನಿ, ಸಂಡೂರು ಇವರು 18-ಹುಲಿಕುಂಟೆ ಗ್ರಾಮದ ಸ.ನಂ. 215 ವಿಸ್ತೀರ್ಣ 6.44 ಎಕರೆ ಜಮೀನನ್ನು ತನ್ನ ಹೆಸರಿಗೆ ಪಟ್ಟಾ ಹೊಂದಿದ್ದು, ಸದ್ರಿ ಜಮೀನು ಜಿಲ್ಲಾಧಿಕಾರಿಗಳು ಬಳ್ಳಾರಿ ಇವರ ಆದೇಶ ಸಂಖ್ಯೆ ಸಂ.ಕಂ.ಭೂಪ/370/2014-15 ದಿನಾಂಕ: 2-8-2015 ರ ಪ್ರಕಾರ ಕೃಷಿ ಜಮೀನನ್ನು ಕೃಷಿಯೇತರ ಕೈಗಾರಿಕೆ (ಸ್ಕ್ರೀನಿಂಗ್ ಮತ್ತು ವಾಷಿಂಗ್ ಘಟಕ) ಉದ್ದೇಶಕ್ಕಾಗಿ ಭೂಪರಿವರ್ತನೆ ಆಗಿದ್ದು, ಪಹಣಿ ಕಾಲಂ 11 ರಲ್ಲಿ ಭೂಪರಿವರ್ತನೆ ಎಂದು ನಮೂದಿಸಲು ದಿನಾಂಕ: 6-10-2015 ರಲ್ಲಿ ಸಲ್ಲಿಸಿದ ಅರ್ಜಿಯನ್ನು ಭೂಮಿ ಸ್ವೀಕೃತಿ ಸಂಖ್ಯೆ 2397/2015-16 ದಿನಾಂಕ:27-02-16 ಅರ್ಜಿಸಲ್ಲಿಸಿದ್ದು, ಇದರ ವಹಿವಾಟು ಸಂಖ್ಯೆ 20/2015-16 ದಿನಾಂಕ:2-8-2015 ಅನ್ನು ಗ್ರಾಮಲೆಕ್ಕಾಧಿಕಾರಿಗಳು 18-ಹುಲಿಕುಂಟೆ ಇವರು ಹಕ್ಕುಬದಲಾಣೆ ಸಂಖ್ಯೆ H-5/2015-16 ದಿನಾಂಕ:2-8-2016 ರ ವಹಿಯಲ್ಲಿ ದಾಖಲಿಸಿಕೊಂಡು ಸಂಬಂಧಿಸಿದವರಿಗೆ ನಮೂನೆ-21 ನೋಟೀಸ್ ಜಾರಿಗೊಳಿಸಲಾಗಿ ನಿಗದಿತ 30 ದಿನಗಳ ಒಳಗಾಗಿ ಸದ್ರಿ ಪ್ರಕರಣಕ್ಕೆ ಸಂಬಂಧಿಸಿದಂತೆ ಯಾವುದೇ ತಕರಾರು ಬಂದಿರುವುದಿಲ್ಲ. ಆದರೆ ಸದ್ರಿ 18-ಹುಲಿಕುಂಟೆ ಗ್ರಾಮದ ಸ.ನಂ. 215 ವಿಸ್ತೀರ್ಣ 6.44 ಜಮೀನನ್ನು ವಾದಿ-1 ಶ್ರೀ.ಮಲ್ಲಿಕಾರ್ಜುನಗೌಡ ತಂದೆ.ಶ್ರೀ.ದೊಡ್ಡನಗೌಡ ಎಲ್.ಬಿ.ಕಾಲೋನಿ, ಸಂಡೂರು ಇವರ ಹೆಸರಿಗೆ ಇದ್ದು, ಸದ್ರಿ ಜಮೀನನ್ನು ಜಿಲ್ಲಾಧಿಕಾರಿಗಳು ಬಳ್ಳಾರಿ ಇವರ ಆದೇಶ ಸಂಖ್ಯೆ ಸಂ.ಕಂ.ಭೂಪ/370/2014-15 ದಿನಾಂಕ:2-8-2015 ರ ಪ್ರಕಾರ ಕೃಷಿ ಜಮೀನನ್ನು ಕೃಷಿಯೇತರ ಕೈಗಾರಿಕೆ (ಸ್ಕ್ರೀನಿಂಗ್ ಮತ್ತು ವಾಷಿಂಗ್ ಘಟಕ) ಉದ್ದೇಶಕ್ಕಾಗಿ ಭೂಪರಿವರ್ತನೆ ಆಗಿದ್ದು, ಪಹಣಿ ಕಾಲಂ 11 ರಲ್ಲಿ ಭೂಪರಿವರ್ತನೆ ಎಂದು ನಮೂದಿಸಲು ಚೆಕ್‌ಲೀಸ್ಟ್ ತೆಗೆಯಬೇಕಾಗಿತ್ತು. ಆದರೆ ಚೆಕ್‌ಲೀಸ್ಟ್ ಹಕ್ಕುಬದಲಾವಣೆ ಎಂದು ತಪ್ಪಾಗಿ ತೆಗೆದಿದ್ದ ಪ್ರಯುಕ್ತ ಪ್ರತಿವಾದಿ ಕಂದಾಯ ನಿರೀಕ್ಷಕರು ಸಂಡೂರು ಇವರು ಗೈರುಮಂಜೂರು ಮಾಡಿದ ಹಿನ್ನಲೆಯಲ್ಲಿ ಗ್ರಾಮಲೆಕ್ಕಾಧಿಕಾರಿಗಳು 18-ಹುಲಿಕುಂಟೆ ಇವರು ಮುಂದಿನ ಕ್ರಮಕ್ಕಾಗಿ ದಿನಾಂಕ: 22-4-2016 ರಂದು ಕಡತವನ್ನು ಸಲ್ಲಿಸಿದ್ದು ಇರುತ್ತದೆ.

ಪ್ರಯುಕ್ತ ಸದ್ರಿ ಪ್ರಕರಣವನ್ನು ಕರ್ನಾಟಕ ಭೂಕಂದಾಯ ಕಾಯ್ದೆ 1964 ರ ಕಲಂ 128 ಹಾಗೂ 129 ರಡಿ ದಾಖಲಿಸಿಕೊಂಡು ಉಭಯರಿಗೆ ಹೇಳಿಕೊಳ್ಳುವ ಅವಕಾಶನೀಡಿ, ಉಭಯರಿಗೆ ವಿಚಾರಣೆಗೆ ಹಾಜರಾಗಲು ದಿನಾಂಕ:22-04-2016 ರಲ್ಲಿ ನಮೂನೆ-21 ನೋಟೀಸು ನೀಡಿ ವಿಚಾರಣೆಯನ್ನು ದಿನಾಂಕ: 25-04-2016 ರಂದು ಪ್ರಾರಂಭಿಸಿ ದಿನಾಂಕ:16-05-2016 ರಂದು ಮುಕ್ತಾಯಗೊಳಿಸಲಾಯಿತು.

(P.T.O)

ಶ್ರೀ.ಮಲ್ಲಿಕಾರ್ಜುನಗೌಡ ತಂದೆ.ಶ್ರೀ.ದೊಡ್ಡನಗೌಡ ಎಲ್.ಬಿ.ಕಾಲೋನಿ, ಸಂಡೂರು ಇವರಿಂದ ಪರವಾನಿಗೆ ಪತ್ರ ಪಡೆದು ಅವರ ಪರವಾಗಿ ಶ್ರೀ.ಗುಲಾಬಖಾನ ತಂದೆ.ರೋಷನ್‌ಖಾನ್ ಪಿ.ಆರ್.ಓ. ಜಯಲಕ್ಷ್ಮಿ ಮಿನಿರಲ್ ಪ್ರೈವೇಟ್ ಲಿಮಿಟೆಡ್ ಸಂಡೂರು ಇವರು ದಿನಾಂಕ:16-5-2016 ರಂದು ಹಾಜರಾಗಿ, ಶ್ರೀ.ಮಲ್ಲಿಕಾರ್ಜುನಗೌಡ ತಂದೆ.ಶ್ರೀ.ದೊಡ್ಡನಗೌಡ ಎಲ್.ಬಿ.ಕಾಲೋನಿ, ಸಂಡೂರು ಇವರ ಹೆಸರಿಗೆ ಇರುವ 18-ಹುಲಿಕುಂಟೆ ಗ್ರಾಮದ ಸ.ನಂ. 215 ವಿಸ್ತೀರ್ಣ 6.44 ಎಕರೆ ಕೃಷಿ ಜಮೀನನ್ನು ಜಿಲ್ಲಾಧಿಕಾರಿಗಳು ಬಳ್ಳಾರಿ ಇವರ ಆದೇಶ ಸಂಖ್ಯೆ ಸಂ.ಕಂ.ಭೂಪ/370/2014-15 ದಿನಾಂಕ:2-8-2015 ರ ಪ್ರಕಾರ ಸದ್ರಿ ಜಮೀನನ್ನು ಕೃಷಿಯೇತರ ಕೈಗಾರಿಕೆ (ಸ್ಕ್ರೀನಿಂಗ್ ಮತ್ತು ವಾಷಿಂಗ್ ಘಟಕ) ಉದ್ದೇಶಕ್ಕಾಗಿ ಭೂಪರಿವರ್ತನೆ ಮಾಡಿದ್ದು, ಪಹಣಿ ಕಾಲಂ 11 ರಲ್ಲಿ ಭೂಪರಿವರ್ತನೆ ಎಂದು ನಮೂದಿಸಲು ಕೋರಿದ್ದು, ಅದರ ಚೆಕ್‌ಲೀಸ್ಟ್ ತೆಗೆಯಬೇಕಾಗಿತ್ತು. ಆದರೆ ಹಕ್ಕಬದಲಾವಣೆ ಎಂದು ತಪ್ಪಾಗಿ ಚೆಕ್‌ಲೀಸ್ಟ್‌ಯೆಂದು ನಮೂದಾಗಿದ್ದು, ಅದನ್ನು ಸರಿಪಡಿಸಿ 18-ಹುಲಿಕುಂಟೆ ಗ್ರಾಮದ ಸ.ನಂ. 215 ವಿಸ್ತೀರ್ಣ 6.44 ಎಕರೆ ಪಹಣಿ ಕಾಲಂ ನಂ.11 ಭೂಪರಿವರ್ತನೆ ಎಂದು ನಮೂದಿಸಲು ಕೋರಿ ವಾದ ಮಂಡಿಸಿದ್ದು ಇರುತ್ತದೆ.

ಪ್ರತಿವಾದಿ ಕಂದಾಯ ನಿರೀಕ್ಷಕರು ಸಂಡೂರು ಇವರು ಸಲ್ಲಿಸಿದ ಕಡತದಲ್ಲಿನ ದಾಖಲೆಗಳನ್ನು ಪರಿಶೀಲಿಸಿ ಈಕಳಗಿನಂತೆ ಆದೇಶಿಸಿದೆ.

ಸಂ.ಕಂ.ಪಹಣಿ/ಹ.ಬ.ವಿವಾದ/1/2016-17 ದಿನಾಂಕ:20-06-2016.

-: ಆದೇಶ :-

ಪೀಠಿಕೆಯಲ್ಲಿ ವಿವರಿಸಿದ ಹಿನ್ನಲೆ, ಸಂದರ್ಭ, ವಾಸ್ತವಾಂಶ ಮತ್ತು ಕಾರಣಗಳಿಂದಾಗಿ ಹಾಗೂ ನನಗೆ ಪ್ರದತ್ತವಾದ ಅಧಿಕಾರದಂತೆ ಕರ್ನಾಟಕ ಭೂಕಂದಾಯ ಅಧಿನಿಯಮ 1964 ರನಿಯಮ 129 ಹಾಗೂ ನಿಯಮ 42 ರಂತೆ ಸಂಡೂರು ತಾಲ್ಲೂಕು, ಸಂಡೂರು ಹೋಬಳಿ 18-ಹುಲಿಕುಂಟೆ ಗ್ರಾಮದ ಸ.ನಂ. 215 ವಿಸ್ತೀರ್ಣ 6.44 ಎಕರೆ ಜಮೀನನ್ನು ಶ್ರೀ.ಮಲ್ಲಿಕಾರ್ಜುನಗೌಡ ತಂದೆ.ಶ್ರೀ.ದೊಡ್ಡನಗೌಡ ಎಲ್.ಬಿ.ಕಾಲೋನಿ, ಸಂಡೂರು ಇವರ ಹೆಸರಿಗೆ ಪಟ್ಟಾವಿದ್ದು ಸದ್ರಿ ಜಮೀನನ್ನು ಜಿಲ್ಲಾಧಿಕಾರಿಗಳು ಬಳ್ಳಾರಿ ಇವರ ಆದೇಶ ಸಂಖ್ಯೆ ಸಂ.ಕಂ.ಭೂಪ/370/2014-15 ದಿನಾಂಕ:2-8-2015 ರ ಪ್ರಕಾರ ಕೃಷಿ ಜಮೀನನ್ನು ಕೃಷಿಯೇತರ ಕೈಗಾರಿಕೆ (ಸ್ಕ್ರೀನಿಂಗ್ ಮತ್ತು ವಾಷಿಂಗ್ ಘಟಕ) ಉದ್ದೇಶಕ್ಕಾಗಿ ಭೂಪರಿವರ್ತನೆಯಾದ ಹಿನ್ನಲೆಯಲ್ಲಿ, ಪಹಣಿ ಕಾಲಂ 11 ರಲ್ಲಿ ಭೂಪರಿವರ್ತನೆ ಎಂದು ನಮೂದಿಸಲು ಆದೇಶಿಸಿದೆ.

ಈ ಆದೇಶವನ್ನು ತಯಾರಿಸಿ ಗಣಕೀಕರಣಗೊಳಿಸಿಕೊಂಡು ಪರಿಶೀಲಿಸಿ ದಿನಾಂಕ:20-06-2016 ರಂದು ಬಹಿರಂಗ ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು, ಸಂಡೂರು.

ಗೆ,

(1) ವಾದಿ ಹಾಗೂ ಪ್ರತಿವಾದಿಗಳಿಗೆ (ಗ್ರಾಮಲೆಕ್ಕಾಧಿಕಾರಿ 18-ಹುಲಿಕುಂಟೆ ಮುಖಾಂತರ)
(2) ಕಂದಾಯ ನಿರೀಕ್ಷಕರು, ಸಂಡೂರು ಇವರಿಗೆ ಸೂಕ್ತಕ್ರಮಕ್ಕಾಗಿ.
(3) ಗ್ರಾಮಲೆಕ್ಕಿಗರು 18-ಹುಲಿಕುಂಟ ಇವರಿಗೆ ಸೂಕ್ತಕ್ರಮಕ್ಕಾಗಿ.
(4) ಈಕಾಯಾಲಯದ ಗಣಕೀಕರಣ ವಿಭಾಗಕ್ಕೆ.